ಸಾಕ್ಷಿಯನ್ನು ದಿನಾಂಕಃ 28/03/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ವಕೀಲರಿಂದಃ**

ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ

ಕಲಂ 200 ಸಿ ಆರ್ ಪಿ ಸಿ ಅಡಿಯಲ್ಲಿ ಹಾಕಿದ ದೂರಿನ ದೃಢೀಕೃತ ನಕಲನ್ನು ನಿಡಿಃ 18 ಎಂದು, ಖಾಸಗಿ ಫಿರ್ಯಾಧಿ ನಂ .57/2015 ರಲ್ಲಿ ಹಾಕಿದ ಪ್ರತಿಜ್ಞೆ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಡಿಃ 19 ಎಂದು, ದಿಃ 28/03/2015 ರಂದು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಗಳ ದೃಢೀಕೃತ ನಕಲನ್ನು ನಿಡಿಃ 20 ಎಂದು, ಸಿಸಿ ನಂ.852/2015 ರಲ್ಲಿ ನೀಡಿದ ಪ್ರಮಾಣದ ಪತ್ರದ ದೃಢೀಕೃತ ನಕಲನ್ನು ನಿಡಿಃ 21 ಎಂದು, ದಿಃ 24/07/2017 ರಂದು ಮತ್ತು ದಿಃ 10/02/2016 ರಂದು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಗಳ ದೃಢೀಕೃತ ನಕಲನ್ನು ನಿಡಿಃ 22 ಮತ್ತು 23 ಎಂದು,ಸಿಸಿ ನಂ.852/2015 ರಲ್ಲಿ ಗೋಪಾಲಕೃಷ್ಣಪ್ಪ ಹೊಸಮನಿ ಇವರು ನೀಡಿದ ಹೇಳಿಕೆ ಮತ್ತು ಅವರ ಪಾಟೀ ಸವಾಲಿನ ದೃಢೀಕೃತ ನಕಲನ್ನು ಒಟ್ಟಾಗಿ ನಿಡಿಃ 24 ಎಂದು, ಸಿಸಿ ನಂ.852/2015 ಆದ ತೀರ್ಪಿನ ದೃಢೀಕೃತ ನಕಲನ್ನು ನಿಡಿಃ 25 ಎಂದು, ಸಿ ವಿಜಯಸಿಂಗ್ ಬ್ಯಾಳಿಯವರು ಕಲಂ 200 ರಡಿಯಲ್ಲಿ ನೀಡಿದ ಫಿರ್ಯಾಧಿಯ ದೃಢೀಕೃತ ನಕಲನ್ನು ನಿಡಿಃ 26 ಎಂದು, ಸದರಿ ವಿಜಯಸಿಂಗ್ ರವರ ಸ್ವ- ಹೇಳಿಕೆ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಡಿಃ 27 ಎಂದು, ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪಾಟೀ ಸವಾಲಿನ ದೃಢೀಕೃತ ನಕಲನ್ನು ಒಟ್ಟಾಗಿ ನಿಡಿಃ 28 ಎಂದು, ಗೋಪಾಲಕೃಷ್ಣ ಹೊಸಮನಿ ಯವರ deposition ನ್ನು ದೃಢೀಕೃತ ನಕಲನ್ನು ನಿಡಿಃ 29 ಎಂದು, ಕೃಷ್ಣಪ್ಪ ಯವರ deposition ನ್ನು ದೃಢೀಕೃತ ನಕಲನ್ನು ನಿಡಿಃ 30 ಎಂದು, ಸಿಸಿ ನಂ.1136/2015 ರ ತೀರ್ಪಿನ ದೃಢೀಕೃತ ನಕಲನ್ನು ನಿಡಿಃ 31 ಎಂದು, ಪ್ರವೀಣರವರ deposition ನ್ನು ದೃಢೀಕೃತ ನಕಲನ್ನು ನಿಡಿಃ 32 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ**

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು, ಆಲಿಸಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
28.03.2026

**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**